# ಈ ಕಣ್ಣುಗಳಿಗೆ

ಜೋಡಿ ದೀಪಗಳುರಿದಂತೆ ತದೇಕ ನಿನ್ನ ಕಣ್ಣು
ಆಗೊಮ್ಮೆ ಈಗೊಮ್ಮೆ ಗಾಳಿಯಾಟಕ್ಕೆ ಕದಲಿ ಜ್ವಾಲೆ
ಭಂಗಗೊಂಡು ಚಿತ್ತ ಬರಬರ ಸೊಡರ ಸದ್ದು.

ಮತ್ತೆ ಅದೇ ಏಕಾಗ್ರ ನೋಟ,
ಅದು ಹಗಲೆಂದರೆ ಹಗಲು, ರಾತ್ರಿಯೆಂದರೆ ರಾತ್ರಿಯೇ.
ಕಡಲು ಮತ್ತು ಗಾಳಿ ಬೆರೆತಂತ ನೋಟ
ಅಲುಗುವುದು ಮತ್ತು ಅಲುಗದಿರುವುದು ಎರಡೂ ಒಂದೇ ಆದ ನೋಟ.

ಈಗ ಇಲ್ಲಿ ನಡುರಾತ್ರಿಯ ಸಮಯ,
ಕತ್ತಲಿಗೆ ಏರುಯೌವ್ವನದ ಹೊತ್ತು;
ಅಗೋ, ಕತ್ತಲಿನ ಬಗಲಲ್ಲೇ ಬೆಳಗಿನ ಬೀಜಗಳು!
ಅವು ಸೃಷ್ಟಿಯ ಜೊತೆ ಮಾತಿಗಿಳಿದ ನಿನ್ನವೇ ಕಣ್ಣುಗಳು.

ನಿನ್ನ ನೆನಪಿನಲ್ಲಿ ಅತ್ತಿಂದಿತ್ತ ಇತ್ತಿಂದತ್ತ ತುಯ್ಯುವ
ನನ್ನ ಕಣ್ಣುಗಳಿಗೆ ಈ ನಟ್ಟ ನಡುರಾತ್ರಿ ನಿನ್ನ ಹಗಲು.

● ತೇಜಶ್ರೀ

